ಸಾಕ್ಷಿಯನ್ನು ದಿಃ 17.09.2016 ರಂದು ಕರೆಯಿಸಿ ಪ್ರಮಾಣಮಾಡಿಸಲಾಯಿತು,

ಪಾಟೀಸವಾಲು ಶ್ರೀ ಸಿ ಆರ್ ಬಿ ವಕೀಲರಿಂದಃ 7ನೇ ಪ್ರತಿವಾದಿಯ ಪರವಾಗಿ

ನನ್ನ ತಾಯಿಯ ಹೆಸರು ನಿಲಾಂಬಿಕಾ . ನನ್ನ ತಂದೆಯ ಹೆಸರು ವೆಂಕಟೇಶಯ್ಯ . ನನ್ನ ತಾಯಿ ನೀಲಾಂಬಿಕಾ ನನ್ನ ತಂದೆಯ ಮೊದಲನೆ ಹೆಂಡತಿ ಅಲ್ಲ 2ನೇ ಹೆಂಡತಿ ಅಂದರೆ ಸರಿಯಲ್ಲ. ನಾನು ಈ ದಾವೆಯನ್ನು 7 ಐಟಂಗೆ ಹಾಕಿದ್ದೇನೆ. 3ನೇ ಪ್ರತಿವಾದಿ ಭೂಲಕ್ಷ್ಮಮ್ಮ ನನ್ನ ತಂದೆಯ 2ನೇ ಹೆಂಡತಿ. ಅವರಿಗೆ 3 ಜನ ಮಕ್ಕಳು. ನಮ್ಮ ತಾಯಿಗೂ 3 ಜನ ಮಕ್ಕಳು. ನನ್ನ ತಾಯಿ ನೀಲಂಬಿಕಾರವರು ತೀರಿಕೊಂಡು 23 ವರ್ಷಗಳಿಗಿಂತಲೂ ಜಾಸ್ತಿ ಆಗಿದೆ. ನನ್ನ ಮದುವೆ ಆಗಿ 15 ವರ್ಷಗಳಾಗಿದೆ. 2ನೇ ಪ್ರತಿವಾದಿ ಮದುವೆ ಆಗಿ 5ವರ್ಷಗಳಾಗಿದೆ. ಆಕೆಯ ಮದುವೆಯನ್ನು ನನ್ನ ತಂದೆಯಿದ್ದಾಗಲೇ ಮದುವೆ ಮಾಡಿದ್ದರು. ನಿಮ್ಮ ತಂಗಿಯ ಮದುವೆಗೆ ನಿಮ್ಮ ತಂದೆ ತುಂಬಾ ಹಣ ಖರ್ಚುಮಾಡಿದ್ದಾರೆಂದರೆ ಸಾಕ್ಷಿ ನನ್ನ ತಂದೆಗೆ ಲಕ್ವಾ ಆಗಿತ್ತು ಎಲ್ಲರೂ ಸೇರಿ ನನ್ನ ತಂಗಿಯ ಮದುವೆ ಮಾಡಿದ್ದು ಎಂದು ನುಡಿಯುತ್ತಾರೆ. ನನ್ನ ತಂಗಿಯ ಮದುವೆಯನ್ನು ನನ್ನ ತಂದೆ ಒಬ್ಬರೇ ಜವಾಬ್ದಾರಿಯಿಂದ ಮಾಡಿದ್ದು ನಾವ್ಯಾರೂ ಮಾಡಿಲ್ಲ ಎಂದರೆಸರಿಯಲ್ಲ. ನನ್ನ ತಂದೆ ತೀರಿಹೋಗುವ ಕಾಲಕ್ಕೆ 10 ವರ್ಷಗಳಿಂದ ಲಕ್ವ ಆಗಿತ್ತು . 1ನೇ ಪ್ರತಿವಾದಿ ನನ್ನ ತಮ್ಮ. ನನ್ನ ಮದುವೆ ಆದ ಸ್ವಲ್ಪದಿನಕ್ಕೆ ನನ್ನ ತಂದೆಗೆ ಲಕ್ವ ಹೊಡೆಯಿತು. ನನ್ನ ತಂದೆ 2ನೇ ಹೆಂಡತಿಯ ಮಕ್ಕಳು , 1 ಮತ್ತು 2ನೇ ಪ್ರತಿವಾದಿ ಎಲ್ಲರೂ ಒಟ್ಟಿಗೆ ಇದ್ದರು . ನಮ್ಮ ತಂದೆಗೆ ಸಂಸಾರ ನಿಭಾಯಿಸಲು ಕಷ್ಟವಾಗಿದ್ದು ಅದಕ್ಕಾಗಿ ನನ್ನ ತಂದೆ ಸಾಲ ಮಾಡಿದ್ದರು ಎಂದರೆ ಸರಿಯಲ್ಲ.

2ನೇ ಪ್ರತಿವಾದಿಯ ಮದುವೆ ಮಾಡಲು ಸಹ ನನ್ನ ತಂದೆ ತುಂಬಾ ಖರ್ಚುಮಾಡಿದ್ದಾರೆಂದರೆ ಸರಿಯಲ್ಲ. ನನ್ನ ತಂದೆ ನನ್ನ ತಂಗಿಯ ಮದುವೆಗಾಗಿ ಒಂದು ಆಸ್ತಿಯನ್ನು ಮಾರಿದ್ದಾರೆಂದರೆ ಸರಿಯಲ್ಲ. ದಾವಾಐಟಂ ನಂ 1ರಲ್ಲಿ ನನ್ನ ತಂದೆ ಮನೆಯ ಖರ್ಚಿಗಾಗಿ 1 ಎಕರೆ 15 ಗುಂಟೆಯನ್ನು 7ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ದಾವಾಐಟಂ ನಂ 1ರಲ್ಲಿ 30 ಗುಂಟೆ ಹೇಮಾವತಿ ಚಾನಲ್‌ಗೆ ಹೋಗಿದೆ ಎಂದರೆ ಸರಿ . ಅದನ್ನು ರಿಜಿಸ್ಟರ್ ಕ್ರಯಪತ್ರದ ಮುಖಾಂತರ 7ನೇ ಪ್ರತಿವಾದಿಗೆ ಮಾರಿದ್ದಾರೆಂದರೆ ಸಾಕ್ಷಿ ನಮಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನೀವು ಮದುವೆಯಾದ ನಂತರ ನಿಮ್ಮ ಗಂಡನ ಮನೆಯಲ್ಲಿ ವಾಸ ಇದ್ದಿರಿ ಎಂದರೆ ಸಾಕ್ಷಿ ನನ್ನ ತಂದೆಗೆ ಲಕ್ವ ಹೊಡೆದಾಗ ಊರಿಗೆ ಬಂದಿದ್ದೆ ಜಮೀನಿನ ಬಗ್ಗೆ ಕೇಳಿದಾಗ ಮಾರಿಲ್ಲ ಎಂದು ಹೇಳಿದರು.

ಸದರಿ ಕ್ರಯಪತ್ರಕ್ಕೆ 1 ರಿಂದ 3ನೇ ಪ್ರತಿವಾದಿಗಳು ಸಹಿ ಮಾಡಿದ್ದಾರೆಂದರೆ ಸಾಕ್ಷಿ ನನ್ನ ತಂದೆ ನಾನು ಜಮೀನನನ್ನು ಯಾವುದನ್ನೂ ಕೊಡುತ್ತೇನೆಂದು ಹೇಳಿರಲಿಲ್ಲ ಸಾಲತೆಗೆದುಕೊಂಡಿದ್ದಕ್ಕೆ ಶಿವಮ್ಮರವರು ಸೀಮೆಎಣ್ಣೆ ತೆಗೆದುಕೊಂಡು ಮನೆಯ ಮುಂದೆ ನಿಂತು ಸಹಿ ಹಾಕಿಕೊಡು ಎಂದು ಗಲಾಟೆ ಮಾಡಿ ಕರೆದುಕೊಂಡು ಹೋದರು ನಾನು ಜಮೀನು ಕೊಟ್ಟಿಲ್ಲ ಎಂದು ನನ್ನ ತಂದೆ ಹೇಳಿದ್ದರು ಎಂದು ನುಡಿಯುತ್ತಾರೆ. ಈ ರೀತಿ ನಾನು ಹುಟ್ಟಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆಸರಿಯಲ್ಲ. ಆ ರೀತಿ ಶಿವಮ್ಮರವರು ಬಲವಂತವಾಗಿ ಜಗಳ ಮಾಡಿ ಕರೆದುಕೊಂಡು ಹೋದರು ಎಂದು ಪೊಲೀಸರಿಗೆ ದೂರು ಕೊಟ್ಟಿಲ್ಲ. ಕ್ರಯಪತ್ರವನ್ನು ಮೋಸದಿಂದ ಮಾಡಿಸಿದ್ದಾರೆಂದು ನಿಮ್ಮ ತಂದೆಯಾಗಲಿ ಅಥವಾ ಪ್ರತಿವಾದಿ 1 ರಿಂದ 3ನೇ ಯವರಾಗಲಿ ಸಿವಿಲ್ ದಾವೆ ಹಾಕಿದ್ದಾರಾ ಎಂದರೆ ಸಾಕ್ಷಿ ಅವರಿಗೆ ಭಯಪಡಿಸಿದ್ದಾರೆಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡದ್ದು ಅಕ್ಟೋಬರ್ 20ರಂದು ಇಸವಿ ಜ್ಞಾಪಕ ಇಲ್ಲ. ತೀರಿಕೊಂಡು ಇವತ್ತಿಗೆ ಸುಮಾರು 4ವರ್ಷಗಳಾಗಿದೆ.

ನಿಮ್ಮ ತಂದೆ ಕೆಟ್ಟ ಚಟಕ್ಕೆ ಬಲಿಯಾಗಿದ್ದಾರೆಂದು ವಾದ ಪತ್ರದಲ್ಲಿ ಬರೆಸಿದ್ದಿರಾ ಎಂದರೆ ಬರೆಸಿದ್ದೇನೆ. ಪ್ರತಿವಾದಿ 1 ರಿಂದ 6ರವರು ಶಾಮೀಲಾಗಿ ಶಿವಮ್ಮರವರಿಗೆ 1 ಎಕರೆ 15 ಗುಂಟೆಯನ್ನು ಮಾರಿದ್ದಾರೆಂದು ವಾದಪತ್ರದಲ್ಲಿ ಬರೆಸಿದ್ದೇನೆ. ನಾನು ಹೇಳಿದಂತೆ ನಮ್ಮತಂದೆಗೆ ಯಾವುದೇ ದುಷ್ಚಟ ಇರಲಿಲ್ಲ ಹಾಗೂ ಕುಟುಂಬದ ನಿರ್ವಹಣೆ ಮತ್ತು ಖಾಯಿಲೆಗೊಸ್ಕರ 7ನೇ ಪ್ರತಿವಾದಿಗೆ ಮಾರಾಟ ಮೂಡಿದ್ದಾರೆಂದರೆಸರಿಯಲ್ಲ . 7ನೇ ಪ್ರತಿವಾದಿ ಕೊಂಡು ಕೊಂಡ ಮೇಲೆ ಅವರ ಹೆಸರಿಗೆ ಖಾತೆ ಪಹಣಿ ಮಾಡಿಸಿಕೊಂಡಿದ್ದಾರ ಎಂದರೆ ಸಾಕ್ಷಿ ಮಾರಾಟ ಮಾಡುವ ವಿಚಾರವೇ ಗೊತ್ತಿಲ್ಲ ಎಂದು ನುಡಿಯುತ್ತಾರೆ . 7ನೇ ಪ್ರತಿವಾದಿಗೆ 22.3.2006 ರಂದು ಕ್ರಯಪತ್ರ ಆಗಿದೆ ಎಂದರೆ ಗೊತ್ತಿಲ್ಲ. 7ನೇ ಪ್ರತಿವಾದಿಯ ಗಂಡನ ಹೆಸರು ಶಿವಣ್ಣ . 7ನೇ ಪ್ರತಿವಾದಿ ಮತ್ತು ಆಕೆಯ ಗಂಡನಿಂದ 23.3.2006 ರಂದು ಮನೆಯ ಖರ್ಚಿಗೊಸ್ಕರ ನನ್ನ ತಂದೆ 2 ಲಕ್ಷದ 63 ಸಾವಿರರೂಗಳನ್ನು ಸಾಲವಾಗಿ ಪಡೆದಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದರಲ್ಲಿ 46 ಸಾವಿರರೂ ಕ್ರಯಕ್ಕೆ ಕೊಟ್ಟು ತೀರಿದೆ ಎಂದರೆ ಗೊತ್ತಿಲ್ಲ. ನಿಮ್ಮ ತಂದೆ ಉಳಿದ 2 ಲಕ್ಷ 17 ಸಾವಿರ ಕೊಡಬೇಕಿತ್ತು ಎಂದರೆ ಸಾಕ್ಷಿ ಅವರು ಸಾಲವೇ ಮಾಡಿಲ್ಲ ಎಂದು ನುಡಿಯುತ್ತಾರೆ. 7ನೇ ಪ್ರತಿವಾದಿ ಮತ್ತು ಅವರ ಗಂಡನಿಂದ ನಿಮ್ಮ ತಂದೆಸಾಲದ ಹಣವನ್ನು ಬ್ಯಾಂಕ್ ಮುಖಾಂತರ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಮನೆಯನ್ನು ಕಟ್ಟಲು ತೆಗೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ನಿವೇ 2 ಲಕ್ಷ 17 ಸಾವಿರರೂಗಳನ್ನು 7ನೇ ಪ್ರತಿವಾದಿಗೆ ಕೊಡಬೇಕು ಎಂದರೆ ಸಾಕ್ಷಿ ನಮ್ಮ ತಂದೆ ಯಾವುದೇ ಹಣ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

ದಾವಾ ಐಟಂ ನಂ4ರಲ್ಲಿ 2 ವರೆ ಗುಂಟೆಯನ್ನು ಮಾರಾಟ ಮಾಡಿ ಎಂದು 11 ಪ್ರತಿವಾದಿ ನಿಮ್ಮ ತಂದೆಯನ್ನು ಕೇಳಿದ್ದರು ಎಂದರೆ ಸಾಕ್ಷಿ ಮುನಿಯಪ್ಪ ನಮ್ಮ ಜಮೀನಿನಲ್ಲಿ ಓಡಾಡುತ್ತಿದ್ದಾರೆಂದು ನುಡಿಯುತ್ತಾರೆ. ನನ್ನ ಜಮೀನಿಗೆ ಹೋಗಲು ರಸ್ತೆ ಮಾಡಿಕೊಳ್ಳುತ್ತೇನೆ ಅದಕ್ಕೆ 2 ವರೆ ಗುಂಟೆಯನ್ನು ನನಗೆ ಮಾರಿ ಎಂದು 11 ನೇ ಪ್ರತಿವಾದಿ ನನ್ನ ತಂದೆಯನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಿಮಗೆ ಮಾರುತ್ತೇನೆ ಎಂದು ನನ್ನ ತಂದೆ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ನಮ್ಮ ಜಮೀನಿನ ದಕ್ಷಿಣದಲ್ಲಿ ಮೃತ್ಯುಂಜಯಪ್ಪರವರ ಉತ್ತರಕ್ಕೆ ದಾರಿಗೊಸ್ಕರ 2ವರೆ ಗುಂಟೆಯನ್ನು ಮಾರಾಟ ಮಾಡುತ್ತೇನೆಂದು ನನ್ನ ತಂದೆ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಅದರಂತೆ ನನ್ನ ತಂದೆ 2ವರೆ ಗುಂಟೆಯನ್ನು 4 ಸಾವಿರರೂಗೆ 17.09.1998 ರಂದು 11ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಇಲ್ಲ. ಮಾರಾಟ ಮಾಡಿ 2 ವರೆ ಗುಂಟೆ ಸ್ವಾಧೀನವನ್ನು 11ನೇ ಪ್ರತಿವಾದಿಗೆ ಕೊಟ್ಟರು ಎಂದರೆ ಸರಿಯಲ್ಲ. ಅಂದಿನಿಂದ 11ನೇ ಪ್ರತಿವಾದಿ 2ವರೆ ಗುಂಟೆಯನ್ನು ರಸ್ತೆಗಾಗಿ ಉಪಯೋಗಿಸುತ್ತಿದ್ದಾರೆಂದರೆ ಸಾಕ್ಷಿ ಮೊದಲಿನಿಂದಲೂ ಅಲ್ಲಿ ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ. 2 ವರೆ ಗುಂಟೆಯನ್ನು 11ನೇ ಪ್ರತಿವಾದಿ ಪೋಡುಮಾಡಿಸಿ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡರು ಎಂದರೆ ಸಾಕ್ಷಿ ಮಾರಾಟ ಮಾಡಿರುವುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 2ವರೆ ಗುಂಟೆಯ ಖಾತೆ ಪಹಣಿ ಈಗಲೂ 11ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. 2ವರೆ ಗುಂಟೆಯನ್ನು 11 ನೇ ಪ್ರತಿವಾದಿಗೆ ಕುಟುಂಬದ ನಿರ್ವಹಣೆಗಾಗಿ ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಚಿಕ್ಕವನಾಗಿದ್ದು ಮನೆಯ ಜವಾಬ್ದಾರಿ ಇರಲಿಲ್ಲ ಎಂದರೆ ಸಾಕ್ಷಿ ಸಾಲಮಾಡುವಂತಹದ್ದು ಏನೂ ಇಲ್ಲ ಆದಾಯ ಚೆನ್ನಾಗಿ ಬರುತ್ತಿತ್ತು ಎಂದು ನುಡಿಯುತ್ತಾರೆ. ನಮ್ಮ ತಂದೆ ಬೇಸಾಯ ಮಾಡದೇ ಇದ್ದುದರಿಂದ ಯಾವುದೇ ಆದಾಯ ಇರಲಿಲ್ಲ ಎಂದರೆಸರಿಯಲ್ಲ.ಮದುವೆ ಆದ ನಂತರ ನಾನು ಬೆಂಗಳೂರಿನಲ್ಲಿ ವಾಸದ್ದೇನೆ ಸಾಕ್ಷಿ ಸ್ವಯಿಚ್ಚೆಯಿಂದ ನಾನು ಊರಿಗೆ ಬಂದು ಹೋಗುತ್ತಿದ್ದೇನೆ ಎಂದು ನುಡಿಯುತ್ತಾರೆ. 7ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯನ್ನು ಹೊಡೆದುಕೊಳ್ಳಬೇಂದು ಸುಳ್ಳು ದಾವಾ ಹಾಕಿದ್ದೇನೆ ಎಂದರೆಸರಿಯಲ್ಲ.

ನನ್ನ ತಂದೆ ಬ್ಯಾಂಕ(ಗಳಲ್ಲಿ ಸಾಲ ಮಾಡಿದ್ದರು ಎಂದರೆಸರಿ .ಅವರ ಸಂಸಾರ ನಿರ್ವಹಣೆಗೆ ತುಂಬಾ ತೊಂದರೆ ಇದ್ದು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆಂದರೆಸರಿಯಲ್ಲ.

ಶ್ರೀ ಬಿ ಎಸ್ ಎಲ್ ವಕೀಲರು ಶ್ರೀ ಸಿ ಆರ್ ಬಿ ವಕೀಲರು ಮಾಡಿರುವ ಪಾಟೀಸವಾಲನ್ನೇ 8 ಮತ್ತು 10ನೇ ಪ್ರತಿವಾದಿಗಳ ಪರವಾಗಿ ಅಳವಡಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ ನೀಡಲಾಯಿತು.

ಪಾಟೀಸವಾಲು ಶ್ರೀ ಬಿ ಎಸ್ ಎಲ್ ವಕೀಲರು ಪ್ರತಿವಾದಿ 8 ಮತ್ತು 10ರವರ ಪರವಾಗಿಃ

ಪ್ರತಿವಾದಿ 8 ಮತ್ತು 10 ರವರು ದಾವಾ ಐಟಂ ನಂ 2 ಮತ್ತು 3ನ್ನು ಖರೀದಿ ಮಾಡಿದ್ದಾರೆಂದರೆ ಸಾಕ್ಷಿ ಮಾರಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬದವರೆಲ್ಲಾ ಸೇರಿ ನೊಂದಣಿ ಕ್ರಯಪತ್ರ ಬರೆದುಕೊಟ್ಟಿದ್ದಿರಿ ಎಂದರೆ ಸಾಕ್ಷಿ ದೇವಸ್ಥಾನಕ್ಕೆ ಎಂದು ಕೇಳಿದ್ದರು ದೇವಸ್ಥಾನ ಕಟ್ಟಿಕೊಳ್ಳಲು ಜಾಗಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ 2ನ್ನು 4ನೇ ಪ್ರತಿವಾದಿಗೆ 1.4.2005 ರಂದು ಕ್ರಯಪತ್ರ ಮಾಡಿಕೊಟ್ಟಿದ್ದಾರೆಂದರೆ ಸಾಕ್ಷಿ ಅವರು ಮಾಡಿಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದು ಈಗ ಅವರ ಹೆಸರಿಗೆ ಖಾತೆ ಆಗಿದೆ. ಐಟಂ ನಂ 3ನ್ನು 10ನೇ ಪ್ರತಿವಾದಿಗೆ 3.1.2005 ರಂದು ನೊಂಚಣಿ ಕ್ರಯಪತ್ರ ಬರೆದುಕೊಟ್ಟಿದ್ದಿರಿ ಎಂದರೆ ಸಾಕ್ಷಿ ದೇವಸ್ಥಾನ ಕಟ್ಟಲು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಅದರಲ್ಲಿ ಒಂದು ದೇವಸ್ಥಾನ ಕೊಟ್ಟಿದ್ದಾರೆಂದರೆ ಸರಿ .ದೇವಸ್ಥಾನ ಕಟ್ಟಿರುವವರು ಈಡಿಗ ಸಮುದಾಯದವರು. ಅವರು ಸಮುದಾಯ ಭವನ ಕಟ್ಟಲು ಪ್ರಯತ್ನಮಾಡುತ್ತಿದ್ದಾರೆಂದರೆ ಅವರು ಸಮುದಾಯ ಭವನ ಕಟ್ಟಿ ಸಮುದಾಯದವರು ಏಳಿಗೆ ಆಗುತ್ತಾರೆಂದು ನನ್ನನ್ನು ಎತ್ತಿಕಟ್ಟಿಸಿ ಸುಳ್ಳು ಕೇಸು ಹಾಕಿಸಿದ್ದಾರೆಂದರೆಸರಿಯಲ್ಲ. ದಾವಾ ಐಟಂ ನಂ 2 ಮತುತ 3ರಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇರದೇ ಇದ್ದರೂ ಸುಳ್ಳು ದಾವಾ ಸಲ್ಲಿಸಿದ್ದೇವೆ ಎಂದರೆಸರಿಯಲ್ಲ. ನಾನು ಸುಳ್ಳು ಕೇಸು ಹಾಕಿ ತೊಂದರೆ ಕೊಡುತ್ತಿದ್ದೇನೆ ಎಂದರೆಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಸರಿ ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ

ಗುಬ್ಬಿ